ಎಸ್. ಗಂಗಾಧರಯ್ಯ

# ಕನ್ನಡದ ಕಂಪಿನಲ್ಲಿ 'ಕರಮಜೋವ್ ಸಹೋದರರು'

ಪ್ರಪಂಚದ ಸಾರ್ವಕಾಲಿಕ ಶ್ರೇಷ್ಠ ಕೃತಿಯಾದ ರಷ್ಯಾದ ಮಹಾ ಲೇಖಕ ಫ್ಯೋದರ್ ದಾಸ್ತೋವ್‌ಸ್ಕಿಯ ಕಾದಂಬರಿ 'ದ ಬ್ರದರ್ಸ್ ಕರಮಜೋವ್' ಅನುವಾದಕರಾದ ಕೆ. ಶ್ರೀನಾಥ್ ಅವರ ಪರಿಶ್ರಮ ಹಾಗೂ ಅಪರಿಮಿತ ಪ್ರೀತಿಯಿಂದಾಗಿ 'ಕರಮಜೋವ್ ಸಹೋದರರು' ಆಗಿ ಮೊದಲ ಬಾರಿಗೆ ಕನ್ನಡದ ಕಂಪಿಗೆ ದಕ್ಕಿದ್ದಾರೆ. ಇದನ್ನು ಹೊರತುಪಡಿಸಿದರೆ ನಾನು ಗಮನಿಸಿರುವಂತೆ ಈ ವರೆಗೆ ಕನ್ನಡಕ್ಕೆ ಬಂದಿರುವ ದಾಸ್ತೋವ್‌ಸ್ಕಿಯ ಬರಹಗಳೆಂದರೆ, 'ಫ್ಯೋದರ್ ದಸ್ತಯೇವಸ್ಕಿ ನೀಳ್ಗತೆಗಳು' (1983) ಅನುವಾದ: ಕೆ.ಎಲ್. ಗೋಪಾಲಕೃಷ್ಣರಾವ್, 'ಅಪರಾಧ ಮತ್ತು ಶಿಕ್ಷೆ' (ಕ್ರೈಂ ಅಂಡ್ ಪನಿಶ್‌ಮೆಂಟ್) ಅನುವಾದ: ಎಸ್.ಎಂ. ಅಂಗಡಿ, 'ಶಾಶ್ವತ ಗಂಡ' (ದಿ ಎಟರ್ನಲ್ ಹಸ್ಬೆಂಡ್) ಅನುವಾದ: ಮಡಿವಾಳಪ್ಪ ತಟ್ಟಿಮನಿ ಹಾಗೂ 'ಅಧೋಲೋಕದ ಟಿಪ್ಪಣಿಗಳು' (ನೋಟ್ಸ್ ಫ್ರಂ ಅಂಡರ್‌ವರ್ಡ್) ಅನುವಾದ: ಗೌತಮ ಜ್ಯೋತ್ಸ್ನಾ, ಇವಲ್ಲದೆ ದಾಸ್ತೋವ್‌ಸ್ಕಿಯ ಇತರೆ ಪ್ರಮುಖ ಕಥಾನಕಗಳು: 'ದ ಈಡಿಯಟ್', 'ಡೆಮನ್ಸ್', 'ಪೂರ್ ಫೋಕ್', 'ದ ಗ್ಯಾಂಬ್ಲರ್', 'ದ ಇನ್ಸಲ್ಟೆಡ್ ಅಂಡ್ ಹ್ಯುಮಿಲಿಯೇಟೆಡ್,' 'ದ ಪೊಸೆಸ್ಡ್', 'ದ ಹೌಸ್ ಆಫ್ ದ ಡೆಡ್'.

'ಕರಮಜೋವ್ ಸಹೋದರರು' ದಾಸ್ತೋವ್‌ಸ್ಕಿ ಬರೆದ ಕೊನೆಯ ಕಾದಂಬರಿ. ಇದು ಸ್ಪಷ್ಟವಾಗಿ ರೂಪುಗೊಳ್ಳುವುದಕ್ಕೂ ಮುಂಚೆ ದಾಸ್ತೋವ್‌ಸ್ಕಿ ಇದನ್ನೊಂದು ಮಕ್ಕಳು ಹಾಗೂ ಬಾಲ್ಯವನ್ನು ಕುರಿತ ಕಾದಂಬರಿಯನ್ನಾಗಿ ಬರೆಯಬೇಕು ಅಂದುಕೊಂಡಿದ್ದನಂತೆ. ಈ ನಿಟ್ಟಿನಲ್ಲಿ ಅವನು ತಯಾರಿಯನ್ನೂ ನಡೆಸುತ್ತಿದ್ದನಂತೆ. ಆದರೆ, ಅಷ್ಟರಲ್ಲಿ ಅವನ ಪುಟಾಣಿ ಮಗ ತೀರಿಕೊಂಡ ಪ್ರಯುಕ್ತ ಆ ಬಗೆಗಿನ ಆಸಕ್ತಿಯನ್ನೇ ಕಳೆದುಕೊಂಡುಬಿಟ್ಟಿದ್ದನಂತೆ. ಅನಂತರ ತುಂಬಾ ದಿನ ಏನನ್ನೂ ಬರೆಯಲಾಗದೆ ಮಗನ ಸಾವಿನ ನೋವಿನಿಂದ ಆಚೆ ಬರಲಾಗದೆ ಪರಿತಪಿಸುತ್ತಿದ್ದನಂತೆ. ಆಗ ಅವನ ಹೆಂಡತಿ ಅನಾ ಗ್ರೆಗೆಯೆನ್ನಾ ಅವನೊಳಗಿನ ನೋವನ್ನು ಕೊಂಚ ತಮಣೆ ಮಾಡುವ ಹಾಗೂ ಅವನ ಮನಸ್ಸನ್ನು ಬೇರೆಡೆಗೆ ತಿರುಗಿಸುವ ಸಲುವಾಗಿ ಆ ಕಷ್ಟದ ದಿನಗಳಲ್ಲಿ ತಮ್ಮನ್ನು ನೋಡಲು ಮನೆಗೆ ಬರುತ್ತಿದ್ದ ತತ್ತ್ವಶಾಸ್ತ್ರಜ್ಞ ಹಾಗೂ ದೇವತಾಶಾಸ್ತ್ರಜ್ಞ ವ್ಲಾದಿಮಿರ್ ಸೋಲೋವ್ಯೋವ್‌ನನ್ನು ತನ್ನೊಂದಿಗೆ ದಾಸ್ತೋವ್‌ಸ್ಕಿಯನ್ನು ಆಪ್ಟಿನಾ ಆಶ್ರಮಕ್ಕೆ (ಆಪ್ಟಿನಾ ಹರ್ಮಿಟೇಜ್)